# ದಾನ ಶೂರ ಕರ್ಣ


ತಮಿಳು ಮೂಲ : ಸಿಯಾಂ
ಕನ್ನಡ : ಸ್ವಾಮಿ ರಾಘವೇಶಾನಂದ
ಚಿತ್ರ : ಶಂಕರ್






ಅಲ್ಲಿಂದ ನೇರ ಅವನು ಕರ್ಣನ ಅರಮನೆಗೆ ಹೊರಟನು.
7
ಸ್ವಾಮೀ, ನನ್ನ ಹೆಂಡತಿಯ ದಹನ ಕ್ರಿಯೆಗಾಗಿ ಸ್ವಲ್ಪ ಗಂಧದ ಮರ ಬೇಕಾಗಿದೆ. ಬೆಳಗಿನಿಂದ ಎಲ್ಲೆಡೆ ಅಲೆಯುತ್ತಿದ್ದೇನೆ. ಎಲ್ಲೂ ಸಿಗಲಿಲ್ಲ. ನೀವಾದರೂ ಸಹಾಯ ಮಾಡಿ.
ಯೋಚಿಸಬೇಡಿ. ದಯವಿಟ್ಟು ಕುಳಿತು ವಿಶ್ರಮಿಸಿಕೊಳ್ಳಿ, ನಾನು ಏರ್ಪಾಡು ಮಾಡುತ್ತೇನೆ.
8
ಯಾರಲ್ಲಿ! ಈ ಬ್ರಾಹ್ಮಣಗೆ ಬೇಕಾಗುವಷ್ಟು ಗಂಧದ ಮರದ ತುಂಡುಗಳನ್ನು ತಕ್ಷಣ ಕೊಡಲು ಏರ್ಪಾಡು ಮಾಡಿ.
ಸೇವಕನು ಸ್ವಲ್ಪ ಹೊತ್ತಾದ ಮೇಲೆ ಬರಿಗೈಯಲ್ಲಿ ಹಿಂದಿರುಗಿದನು...
ಸ್ವಾಮೀ, ಅರಮನೆಯಲ್ಲಾಗಲೀ, ಬೇರೆಲ್ಲಾಗಲೀ ಎಲ್ಲೂ ಗಂಧದ ಮರವಿಲ್ಲ.
9
ನಾನು ನತದೃಷ್ಟ. ಬರುತ್ತೇನೆ. ಮಹಾರಾಜ.
ದಯವಿಟ್ಟು ನಿಧಾನಿಸಿ. ಇದುವರೆಗೆ ನಾನು ಕೈ ಚಾಚಿ ಬಂದವರನ್ನು ಎಂದೂ ಬರಿಗೈಯಲ್ಲಿ ಹಿಂದಿರುಗಿ ಕಳುಹಿಸಿಲ್ಲ. ಈ ನನ್ನ ಆಸ್ಥಾನದ ಕಂಬಗಳು ಗಂಧದ ಮರದಿಂದ ಮಾಡಿರುವುದು.
10
ಯಾರಲ್ಲಿ! ಬೇಗ ಒಂದು ಕೊಡಲಿಯನ್ನು ತೆಗೆದುಕೊಂಡು ಬಾ.
ಈ ಕಂಬಗಳನ್ನು ಕತ್ತರಿಸುವೆ. ಪುಣ್ಯಕಾರ್ಯಕ್ಕೆ ಉಪಯೋಗವಾಗಲಿ.
11
ಎಲ್ಲರೂ ನೋಡುತ್ತಿದ್ದಂತೆಯೇ, ಒಂದೊಂದಾಗಿ ಕಂಬಗಳನ್ನು ಕತ್ತರಿಸಿ ಉರುಳಿಸಿದ. ಆಗ ಅರಮನೆಯ ಒಂದು ಪಾರ್ಶ್ವ ಕುಸಿಯಿತು.
12


13
ಅದು ಪರವಾಗಿಲ್ಲ. ನಿನ್ನನ್ನು ಬರಿಗೈಯಲ್ಲಿ ಕಳುಹಿಸುವುದನ್ನು ನಾನು ಸಹಿಸಲಾರೆ.
ಓ, ಅರಮನೆಯೇ ಬೀಳುತ್ತಿದೆ.
14
ಒಂದು ಬಂಡಿಯಲ್ಲಿ ಇದನ್ನೆಲ್ಲಾ ಅವನ ಮನೆಗೆ ಕಳುಹಿಸು.
15
ರಸ್ತೆಯಲ್ಲಿ, ಕೃಷ್ಣ ಅರ್ಜುನರು ಆ ಬಂಡಿಯನ್ನು ನೋಡಿದರು.
ಗಂಧದ ಮರ ಎಲ್ಲಿ ಸಿಕ್ಕಿತು?
ಮಹಾತ್ಮ ಕರ್ಣನು, ತನ್ನ ಅರಮನೆಯ ಕಂಬಗಳನ್ನೇ ಕತ್ತರಿಸಿ ಕೊಟ್ಟನು.
16
ಅರ್ಜುನಾ! ನಾನು ಕರ್ಣನನ್ನು ಏಕೆ ಹೊಗಳುತ್ತೇನೆ ಎಂದು ಈಗ ಅರ್ಥವಾಯಿತೇ? ಯಾರಿಗೆ ನಿಜವಾಗಿ ಕೊಡಬೇಕೆಂಬ ಮನಸ್ಸಿರುತ್ತದೋ ಅವರು ಹೇಗಾದರೂ ಮಾರ್ಗವನ್ನು ಕಂಡುಹಿಡಿಯುತ್ತಾರೆ. ಕರ್ಣ ದಾನಶೂರರಲ್ಲೇ ಶ್ರೇಷ್ಠನೆಂದು ನೀನು ಈಗ ಒಪ್ಪುತ್ತೀಯೆ ಎಂದು ನಂಬುತ್ತೇನೆ.
ಹೌದು.